ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **30-12-2024**

ಪಾಟಿ ಸವಾಲುಃ ಶ್ರೀ. ಪಿ.ಜಿ.ಎಂ ವಕೀಲರಿಂದ

ಆರೋಪಿ ನನಗೆ **10** ವರ್ಷಗಳಿಂದ ಪರಿಚಯ ಇರುತ್ತಾರೆ. ನಮ್ಮ ಕಟ್ಟಡದಲ್ಲಿ ಆಯುರ್ವೇದಿಕ್ ಅಂಗಡಿ ಇದೆ ಅಲ್ಲಿಗೆ ಆರೋಪಿ ಬರುತ್ತಿದ್ದರು ಆಗ ಪರಿಚಯ ಇರುತ್ತದೆ. ನನಗೆ ರಾಮ ಕಾಂಪ್ಲೇಕ್ಸ್ ಇರುತ್ತದೆ. ಆರೋಪಿ ಹಿಂದೆ ನನ್ನ ಬಾಡಿಗೆದಾರರಾಗಿದ್ದರು. ನಾನು **2011** ರಲ್ಲಿ ಆ ಕಟ್ಟಡ ಖರೀದಿ ಮಾಡಿರುತ್ತೇನೆ. ಅದಕ್ಕಿಂತ ಮೊದಲು ಆರೋಪಿ ಬಾಡಿಗೆದಾರರಾಗಿದ್ದರು. ಆರೋಪಿಗೆ **2021** ರ ಜೂನ್ ಮೊದಲ ವಾರದಲ್ಲಿ ಆರೋಪಿಗೆ **6** ಲಕ್ಷ ಸಾಲ ಕೊಟ್ಟಿರುತ್ತೇನೆ ದಿನಾಂಕ ನೆನಪಿಲ್ಲ. ಸ್ವಲ್ಪ ಸಮಯದ ನಂತರ ಹಣ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು, ನಂತರ ನಾನು ಕೇಳಿದಾಗ ದಿಃ**18-08-2022** ರಂದು ನನಗೆ ಚೆಕ್ ಅನ್ನು ಆರೋಪಿ ಕೊಟ್ಟಿರುತ್ತಾರೆ. ಮಾರನೇ ದಿನ ಚಕ್ ಅನ್ನು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ.

ನನಗೆ ಬಾಡಿಗೆ ಹಣ ಬರುತ್ತದೆ ಮತ್ತು ನನಗೆ ಕಾಫಿ ತೋಟ ಇರುತ್ತದೆ. ಅದರ ಆದಾಯದಿಂದ ಹಣ ಬರುತ್ತದೆ. ಕಾಫಿ ತೋಟ ಹಣಕೊಡು ಮತ್ತು ಗರಗಂದೂರಿನಲ್ಲಿರುತ್ತದೆ. ಕಾಫಿ ಮಾರಿದ ಹಣ ಮತ್ತು ಬಾಡಿಗೆ ಹಣ ನಗದು ರೂಪದಲ್ಲಿತ್ತು ಅದನ್ನು ಆರೋಪಿಗೆ ಕೊಟ್ಟಿರುತ್ತೇನೆ. ಗರಗಂದೂರಿನವರಿಗೆ ಕಾಫಿ ಮಾರಾಟ ಮಾಡಿರುತ್ತೇನೆ. ಸಾಲ ಕೊಡುವಾಗ ಯಾರು ಇರಲಿಲ್ಲ, ನಾನು ಮತ್ತು ಆರೋಪಿ ಮಾತ್ರ ಇದ್ದೇವು. ನಾನು ಸಾಲ ಕೊಡುವ **2-3** ಸಲ ಗುತ್ತಿಗೆಗೆ ಹಣ

ಬೇಕು ಎಂದು ಪಡೆದಿದ್ದರು. ಗುತ್ತಿಗೆ ಕೆಲಸಕ್ಕೆ ನಾನು ಸಾಲ ಕೊಟ್ಟಿಲ್ಲ ಹಣದ ಅವಶ್ಯಕತೆ ಇದ್ದ ಬಗ್ಗೆ ನನಗೆ ತಿಳಿಸಿರುತ್ತಾರೆ. ಒಂದೇ ಕಂತಿನಲ್ಲಿ ಸಾಲ ಕೊಟ್ಟಿರುತ್ತೇನೆ ಬಡ್ಡಿಗೆ ಹಣ ಕೊಟ್ಟಿಲ್ಲ. ಹಣ ವಾಪಸ್ಸು ಕೊಡುವಾಗ ಅಸಲು ಹಣಕ್ಕೆ ಏನಾದರೂ ಸೇರಿಸಿ ಕೊಡುತ್ತೇನೆ ಎಂದ ಹೇಳಿದ್ದರು. ಆ ಬಗ್ಗೆ ಯಾವುದೇ ಪತ್ರ ಆಗಿಲ್ಲ.

ಆರೋಪಿ ಕುಶಾಲನಗರಕ್ಕೆ ಯಾವಾಗ ಹೋಗಿರುತ್ತಾರೆ ಎಂದು ನೆನಪಿಲ್ಲ. **2013** ರಲ್ಲಿ ಆರೋಪಿ ಸೋಮವಾರಪೇಟೆಯಿಂದ ಕುಶಾಲನಗರಕ್ಕೆ ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ವ್ಯವಹಾರ ಜ್ಞಾನ ಚೆನ್ನಾಗಿದೆ. ಬ್ಯಾಂಕಿನ ಜ್ಞಾನ ಚೆನ್ನಾಗಿದೆ. ನನ್ನ ಬಳಿ ನಗದು ಹಣ ಇದ್ದ ಕಾರಣ ನಾನು ಕೊಟ್ಟಿರುತ್ತೇನೆ. ಹಣದ ಮುಖ ಬೆಲೆ ನೆನಪಿಲ್ಲ. ಬ್ಯಾಂಕಿನ ಹಿಂಬರ ಆರೋಪಿಯ ಖಾತೆ ಮುಕ್ತಾಯವಾಗಿರುತ್ತದೆ ಎಂದು ಬಂದಿರುತ್ತದೆ. ಯಾವಾಗ ಮುಕ್ತಾಯವಾಗಿದೆ ಎಂದು ಗೊತ್ತಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

**ಸಹಿ/-**

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**